- 6 -
ಕ್ರಿಮಿನಲ್ ಮಿಸ್ ಸಂ. : **247/2018**
**ಪಿ.ಡಬ್ಲ್ಯೂ : 01**

**ದಿನಾಂಕ : 10.11.2023 ರಂದು** ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲು :- ಎದುರುದಾರರ ಪರ ಶ್ರೀ. ಎನ್ ಸಿ ವಕೀಲರಿಂದ :-**

ಮದುವೆಯ ಸಮಯದಲ್ಲಿ ನಿಮ್ಮ ತಂದೆಯವರು ಎದುರುದಾರರಿಗೆ ಯಾವುದೇ 30 ಗ್ರಾಂ ಬೆಳ್ಳಿಯನ್ನು ಕೊಟ್ಟಿರುವುದಿಲ್ಲ ಎಂದರೆ ಸಾಕ್ಷಿ ಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ 30 ಗ್ರಾಂ ಬೆಳ್ಳಿಯನ್ನು ನಿಮ್ಮ ತಂದೆಯವರು ಕೊಟ್ಟಿರುತ್ತಾರೆ ಎಂದು ತೋರಿಸಲು ನ್ಯಾಯಾಲಯಕ್ಕೆ ದಾಖಲೆಗಳನ್ನು ಕೊಟ್ಟಿರುತ್ತೀರಾ ಎಂದರೆ ಸಾಕ್ಷಿ ಕೊಟ್ಟಿರುತ್ತೇನೆ ಎಂದು ನುಡಿಯುತ್ತಾರೆ. ಅದಕ್ಕೆ ಸಂಬಂಧಪಟ್ಟಂತೆ ಯಾವುದೇ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಕೊಟ್ಟಿರುವುದಿಲ್ಲ ಎಂದರೆ ಸಾಕ್ಷಿಯು ಬರೆಸಿರುತ್ತೇನೆ ಎಂದು ನುಡಿಯುತ್ತಾರೆ. ಮದುವೆಯಾದ ನಂತರ ಬೀಗರಊಟವನ್ನು ಬೆಂಗಳೂರಿನಲ್ಲಿ ಎದುರುದಾರರು ಮಾಡಿಸಿರುತ್ತಾರೆ ಎಂದರೆ ಸಾಕ್ಷಿ ನನ್ನ ತಂದೆಯವರೆ ಮಾಡಿಸಿರುತ್ತಾರೆ ಎಂದು ನುಡಿಯುತ್ತಾರೆ. ನಿಮ್ಮ ಊರಿನಲ್ಲಿ ಮಾಡಿಸಿರುವುದಿಲ್ಲ ಬೆಂಗಳೂರಿನ ಅಂಜನನಗರದಲ್ಲಿ ಮಾಡಿಸಿದ್ದರು ಎಂದರೆ ಸಾಕ್ಷಿ ಸುಳ್ಳು ಎಂದು ನುಡಿಯುತ್ತಾರೆ. ತಮಗೆ ಗೊತ್ತಿದ್ದರೂ ಜೀವನಾಂಶ ಹಣ ಪಡೆಯ ಬೇಕೆಂದು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ.

ನಿಮ್ಮ ಮುಖ್ಯ ವಿಚಾರಣೆಯ ಪ್ರಮಾಣಪತ್ರದಲ್ಲಿ ಹೇಳಿದಂತೆ ನಿಮ್ಮ ತಂದೆಯವರು ಎದುರುದಾರರಿಗೆ ಯಾವುದೇ 2 ಲಕ್ಷ ಹಣವನ್ನು

ಕೊಟ್ಟಿರುವುದಿಲ್ಲ, ಕೊಟ್ಟಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸಾಕ್ಷಿ 2 ಲಕ್ಷ ಹಣ ಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ 2 ಲಕ್ಷ ಹಣವನ್ನು ಕೊಟ್ಟ ಬಗ್ಗೆ ದಾಖಲಾತಿಗಳನ್ನು ಹಾಗೂ ಯಾರ ಸಮಕ್ಷಮ ಕೊಟ್ಟಿರುತ್ತಾರೆ ಎಂದು ಸಾಕ್ಷಿ ಮಾಡಿಸಿರುತ್ತೀರಾ ಎಂದರೆ ಸಾಕ್ಷಿ ನನ್ನ ತಂದೆಯವರು ತನ್ನ ಮಗಳು ಚೆನ್ನಾಗಿ ಇರಲಿ ಎಂದು ಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ. 2012 ನೇ ಇಸವಿಯಲ್ಲಿ ಎದುರುದಾರರು ನೀವು ಹೇಳುವಂತೆ ಯಾವುದೇ ಮನೆಯನ್ನು ಕಟ್ಟಿರುವುದಿಲ್ಲ ಎಂದರೆ ಸಾಕ್ಷಿ ಕಟ್ಟಿರುತ್ತೇವೆ ಎಂದು ನುಡಿಯುತ್ತಾರೆ. 2012 ರಲ್ಲಿ ಯಾವುದೇ ಮನೆಯನ್ನು ಕಟ್ಟಿರುವುದಿಲ್ಲ , ಕಟ್ಟಿರುತ್ತೇವೆ ಎಂದು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸಾಕ್ಷಿ ಕಟ್ಟಿರುತ್ತೇವೆ ಎಂದು ನುಡಿಯುತ್ತಾರೆ.

2014 ರಲ್ಲಿ ಎದುರುದಾರರು ಮನೆಯನ್ನು ಕಟ್ಟಿರುತ್ತಾರೆ ಎಂದರೆ ಸಾಕ್ಷಿ 2014 ರಲ್ಲಿ ಕಟ್ಟಿಸಿದ್ದು ಸರಿ ಇರುತ್ತದೆ ಆದರೆ 2012 ರಲ್ಲಿ ಪಾಯಹಾಕಿಸಿದ್ದರು ಎಂದು ನುಡಿಯುತ್ತಾರೆ. 2012 ನೇ ಇಸವಿಯಲ್ಲಿ ಯಾವುದೇ ಪಾಯ ಹಾಕಿದ್ದಿರಲಿಲ್ಲ ಸುಳ್ಳು ಹೇಳುತ್ತಿದ್ದೀರಿ ಎಂದರೆ ಸಾಕ್ಷಿ ಸುಳ್ಳು ಹೇಳುತ್ತಿರುವುದಿಲ್ಲ ಎಂದು ನುಡಿಯುತ್ತಾರೆ. ಈಗ ಸಾಕ್ಷಿಗೆ ಪೋಟೋದಲ್ಲಿ ಇರುವ ಮನೆಯನ್ನು ತೋರಿಸಲಾಗಿ ಸದರಿ ಮನೆ ಇದೆಯೇ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಆ ಕಾರಣ ಸದರಿ ಪೋಟೋವನ್ನು **ನಿಆರ್-1 ಎಂದು** ಗುರುತಿಸಲಾಯಿತು. ಸದರಿ ಮನೆಯನುನ ದಿನಾಕ 16.05.2014 ರಂದು ನಿರ್ಮಿಸಿರುತ್ತಾರೆ ಎಂದು ಬರೆದಿರುತ್ತಾರೆ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಪಾಯ ನಿರ್ಮಿಸುವ ಸಲುವಾಗಿ ಹಣವನ್ನು ನನ್ನ ತಂದೆಯವರು ಕೊಟ್ಟಿರುತ್ತಾರೆ ಎಂದು ಪ್ರಮಾಣಪತ್ರದಲ್ಲಿ ಹೇಳಿ ಬರೆಸಿರುತ್ತೀರಾ ಎಂದರೆ ಸಾಕ್ಷಿ ಬರೆಸಿರುತ್ತೇನೆ ಎಂದು ನುಡಿಯುತ್ತಾರೆ. ಎದುರುದಾರರು ಸಾಲವನ್ನು ಮಾಡಿ ಸದರಿ ಮನೆಯನ್ನ ನಿರ್ಮಿಸಿರುತ್ತಾರೆ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ.

ಎದುರುದಾರರೊಂದಿಗೆ ಎಷ್ಟು ವರ್ಷಗಳ ಕಾಲ ಸಂಸಾರ ಮಾಡಿರುತ್ತೀರಿ ಎಂದರೆ ಸಾಕ್ಷಿ 20 ವರ್ಷಗಳ ಕಾರಣ ಜೊತೆಯಲ್ಲೆ ಇದ್ದೆನು ಎಂದು ನುಡಿಯುತ್ತಾರೆ. ಯಾವ ವರ್ಷದಂದು ನೀವು ಎದುರುದಾರರನ್ನು ಬಿಟ್ಟಿರುತ್ತೀರಿ ಎಂದರೆ ಸಾಕ್ಷಿ ದಿನಾಂಕ 17.9.2018 ರಂದು ಎಂದು ನುಡಿಯುತ್ತಾರೆ. ಎದುರುದಾರರು ಸಾಲ ಮಾಡಿ ಮನೆಯನ್ನು ನಿರ್ಮಿಸಿದ್ದ ಬಗ್ಗೆ ಗೊತ್ತಿದ್ದರೂ , ಜೀವನಾಂಶ ಪಡೆಯಬೇಕೆಂಬ ಉದ್ದೇಶದಿಂದ ಸಾಲ ಇರುವುದಿಲ್ಲವೆಂದು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ.

ಎದುರುದಾರರ ಕುಟುಂಬದವರು ನಿಮಗೆ ತೊಂದರೆ ಕೊಡುತ್ತಿದ್ದರು ಎಂದು ಹೇಳಿದ್ದು ಆ ಸಂಬಂಧ ಮಹಿಳಾ ಆಯೋಗಕ್ಕೆ ಹಾಗೂ ಪೋಲಿಸ್ ಠಾಣೆಗೆ ದುದಾರನ್ನು ಕೊಟ್ಟಿರುತ್ತೀರಾ ಎಂದರೆ ಸಾಕ್ಷಿ ನಾನು ಕೊಟಿಟರುವುದಿಲ್ಲ ಎಂದು ನುಡಿಯುತ್ತಾರೆ, ಸಾಕ್ಷಿ ಮುಂದುವರೆದು ಅವರೆ ಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ಯಾವ ಇಸವಿಯಲ್ಲಿ ದೂರನ್ನು ಕೊಟ್ಟಿದ್ದರು ಎಂದರೆ ಸಾಕ್ಷಿ 2018 ರಲ್ಲೆ ಎಂದು ನುಡಿಯುತ್ತಾರೆ. ದಿನಾಂಕ 17.09.2018 ರ ಂದು ಎದುರುದಾರರು ದೂನರ್ುನ ಕೊಟ್ಟಿರುತ್ತಾರೆ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ಯಾವ ವಿಚಾರಕ್ಕಾಗಿ ದೂರನ್ನು ಕೊಟ್ಟಿದ್ದರು ಎಂದರೆ ಸಾಕ್ಷಿ ಓಡಿಹೋಗಿರುತ್ತಾರೆ ಎಂದು ದದೂರನ್ನು ಕೊಟ್ಟಿರತ್ತಾರೆ ಎಂದು ನುಡಿಯುತ್ತಾರೆ. ಚಿನ್ನ,ಬೆಳ್ಳಿ ಹಾಗೂ ರಾಗಿ ಮಾರಾಟ ಮಾಡಿರುತ್ತೀರಿ ಹಾಗೂ ಸದರಿ ರಾಗಿ ಚೀಲದಲ್ಲಿ ಮರಳನ್ನು ುಂಬಿ ಇಟ್ಟಿದ್ದಿರಿ ಎಂದು ಹಾಗೂ ಅಕ್ರಮ ಸಂಬಂಧವಾಗಿ ದೂರನ್ನು ಕೊಟ್ಟಿದ್ದರು ಎಂದರೆ ಸಾಕ್ಷಿ ಸುಳ್ಳು ಎಂದು ನುಡಿಯತ್ತಾರೆ.

ದಿನಾಂಕ 05.10.2015, 29.05.2015, 15.03.2016, 24.11.2016 ಹಾಗೂ 15.112017 ರಂದು ಶ್ರೀರಂಗ ಬ್ಯಾಂಕರ್ಸ್‌ಗಿಗಿರವಿ ಅಂಗಡಿಯಲ್ಲಿ ಚಿನ್ನವನ್ನು ಅಡಮಾನ ಇಟ್ಟಿದ್ದಿರಿ ಎಂದರೆ ಸಾಕ್ಷಿ ಅವರೆ ಕರೆದುಕೊಂಡು ಹೋಗಿ ಅಡಮಾನ ಇಟ್ಟಿಸಿರತ್ತೂರೆ ಎಂದು ನುಡಿಯುತ್ತಾರೆ. ಸದರಿ ಗಿರವಿ ಪತ್ರ ಸಾವಿತ್ರಮ ರವರ ಹೆಸರಿಲ್ಲಿ ಇದೆ ಎಂದರೆ ಸಾಕ್ಷಿ ಹೌದು ಎಂದುನುಡಿಯುತ್ತಾರೆ. ಸದರಿ ಗಿರವಿ ಪತ್ರವನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅವುಗಳನ್ನು ಕ್ರಮವಾಗಿ ನಿಆರ್-2, ನಿಆರ್-3, ನಿಆರ್-4 , ನಿಆರ್-05 ಮತ್ತು ನಿಆರ-06 ಎಂದು ಗುರುತಿಸಲಾಯಿತು. ರೂ.12,000/- ಗಳಿಗೆ 2 ಜೊತೆ ಓಲೆಯನ್ನು ಅಡಮಾನ ಇಟ್ಟಿರುತ್ತೀರಿ ಎಂದರೆ ಸಾಕ್ಷಿ ಹೌದು ಎದುರುದಾರರೇ ಕರೆದುಕೊಂಡು ಹೋಗಿದ್ದರು ಎಂದು ನುಡಿಯುತ್ತಾರೆ. ಅದರಕ್ಕೆ ಸಹಿಯನ್ನು ತಾವೇ ಮಾಡಿರುತ್ತೀರಿ ಎಂದರೆ ಸಾಕ್ಷಿ ಸಹಿ ಮಾಡಲು ಹೇಳಿದ್ದರು ಆ ಕಾರಣ ನಾನೇ ಮಾಡಿರುತ್ತೇನೆ ಎಂದು ನುಡಿಯುತ್ತಾರೆ. ಅದೇ ರೀತಿ ಉಂಗುರವನ್ನು ರೂ. 3,500/- ಗಳಿಗೆ ಅಡಮಾನ ಇಟ್ಟಿರುತ್ತೀರಿ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಓಲೆಯನ್ನು ರೂ. 6,500/-ಗಳಿಗೆ ಅಡಮಾನ ಮಾಡಿರುತ್ತೀರಿ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಚೈನು ಹಾಗೂ ನೆಕ್ಲೆಸ್ ಗಳನ್ನು ಅಂಬಿಕ ಜ್ಯೂಯೇಲರ್ಸ್ ನಲ್ಲಿ ರೂ, 46,000/- ಗಳಿಗೆ ಅಡಮಾನ ಮಾಡಿರುತ್ತೀರಿ ಎಂದರೆ ಸಾಕ್ಷಿ ಹೌದು ಅವರೇ ಕರೆದುಕೊಂಡು ಹೋಗಿದ್ದರು ಎಂದು ನುಡಿಯುತ್ತಾರೆ. ದಿನಾಂಕ 15.03.2017 ರಂದು ದೇವಿ ಬ್ಯಂಕರ್ಸ್ ನಲ್ಲಿ ಅಡಮಾನ ಇಟ್ಟಿರುತ್ತೀರಿ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ನೆಕ್ಲೆಸ್ ಹಾಗೂ ಮಾಂಗಲ್ಯ ಚೈನುಗಳನ್ನು ರೂ. 38,000/- ಗಳಿಗೆ ಅಡಮಾನ ಇಟ್ಟಿರುತ್ತೀರಿ ಎಂದರೆ ಸಾಕ್ಷಿ ಹೌದು ಅವರೇ ಕರೆದುಕೊಂಡು ಹೋಗಿರುತ್ತಾರೆ ಎಂದು ನುಡಿಯುತ್ತಾರೆ. ಎದುರುದಾರರೇ ಕರೆದುಕೊಂಡು ಹೋಗಿದ್ದರೆ ಅವರ ಹೆಸರಿನಲ್ಲೆ ಅಡಮಾನ ಇಡುತ್ತಿದ್ದರು , ನೀವು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸಾಕ್ಷಿ ಸುಳ್ಳು ಹೇಳುತ್ತಿರುವುದಿಲ್ಲ ಎಂದು ನುಡಿಯುತ್ತಾರೆ. ಎದುರುದಾರರು

ಆರ್ಥಿಕವಾಗಿ ಚೆನ್ನಾಗಿ ಇದ್ದರು ಎಂದು ನೀವೆ ಹೇಳಿದ್ದು ಆ ಕಾರಣ ಅವರಿಗೆ ಗಿರವಿ ಇಡಲು ಯಾವುದೇ ಅವಶ್ಯಕತೆ ಇದ್ದಿರಲಿಲ್ಲ ಎಂದರೆ ಸಾಕ್ಷಿ ಸುಳ್ಳು ಎಂದು ನುಡಿಯುತ್ತಾರೆ. ಸದರಿ ಅಂಬಿಕ ಜ್ಯೂವೆಲ್ಲರ್ಸ್ , ದೇವಿ ಬ್ಯಾಂಕರ್ಸ್ ಮಾಗಡಿಯಲ್ಲೆ ಇರುತ್ತದೆ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಸದರಿ ಅಂಬಿಕಾ ಜ್ಯೂಯಲರ್ಸ್ ಹಾಗೂ ದೇವಿ ಬ್ಯಾಂಕರ್ಸ್ ರವರನ್ನು ಕರೆಯಿಸಿ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಸುತ್ತೀರಾ ಎಂದರೆ ಎಂದರೆ ಸಾಕ್ಷಿ ಎದುರುದಾರರನ್ನೇ ಕೇಳಿ ಅವರೇ ಕರೆದುಕೊಂಡು ಹೋಗಿದ್ದರು ಎಂದು ನುಡಿಯುತ್ತಾರೆ. ಸದರಿ ಅಂಬಿಕಾ ಜ್ಯುಯೆಲರ್ಸ , ರಂಗ ಜ್ಯೂಯೆಲರ್ಸ್, ದೇವಿ ಬ್ಯಾಂಕರ್ಸ್‌ರವರು ಎದುರುದಾರರಿಗೆ ಗೊತ್ತೆ ಇರುವುದಿಲ್ಲ ಎಂದರೆ ಸಾಕ್ಷಿ ಸುಳ್ಳು ಎಂದು ನುಡಿಯುತ್ತಾರೆ. ಆ ಸಂಬಂಧವಾಗಿ 2018 ರಲ್ಲಿ ಎದುರುದಾರರು ಅಕ್ರಮವಾಗಿ ಒಡವೆಗಳನ್ನು ಅಡಮಾನ ಮಾಡಿದ್ದರ ಬಗ್ಗೆ ಹಾಗೂ ರಾಗಿ ಮೂಟೆಗಳನ್ನು ಮಾರಾಟ ಮಾಡಿದ ಬಗ್ಗೆ ದೂರನ್ನು ಕೊಟ್ಟಿದ್ದರು ಎಂದರೆ ಸಾಕ್ಷಿ ಸುಳ್ಳು ಎಂದು ನುಡಿಯುತ್ತಾರೆ. 2018 ರಲ್ಲಿ ಎದುರುದಾರರು ತೂಂದರೆ ಕೊಟ್ಟ ಬಗ್ಗ ಅಂದೆ ದೂರನ್ನು ಕೊಡಬಹುದಿತ್ತು ನಿಮಗೆ ಅಕ್ರಮ ಸಂಬಂಧ ಇದ್ದ ಕಾರಣ ಅದು ಗೊತ್ತಾಗುತ್ತದೆ ಎಂಬ ಉದ್ದೇಶದಿಂದ ದೂರನ್ನು ಕೊಟ್ಟಿರುವುದಿಲ್ಲ ಎಂದರೆ ಸಾಕ್ಷಿ ಸುಳ್ಳು ಎಂದು ನುಡಿಯುುತ್ತಾರೆ. 2018 ರಲ್ಲಿ ಎದುರುದಾರರು ನಿಮಗೆ ಯಾವುದೇ ಹೊಡೆ ಬಡೆ ಮಾಡಿರುವುದಿಲ್ಲ ಹಾಗೂ ಮನೆಯಿಂದ ಹೊರಗೆ ಹಾಕಿರುವುದಿಲ್ಲ ಎಂದರೆ ಸಾಕ್ಷಿ ಸುಳ್ಳು ಎಂದು ನುಡಿಯುತ್ತಾರೆ.

**ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ಎದುರುದಾರರ ಪರ ವಕೀಲರು ಸಮಯ ಕೋರಿದ್ದರಿಂದ ಸಮಯ ನೀಡಲಾಯಿತು.**

**ಓ. ಹೇ. ಕೇ. ಸ. ಇ. ಎ. ಒಪ್ಪಿರುತ್ತಾರೆ,**

**ಪ್ರ. ಸಿ. ಜ. ಮತ್ತು ಜೆ. ಎಂ. ಎಫ್?ಸಿ. ಮಾಗಡಿ.**